**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಕ್ರಿಮಿನಲ್ ಮಿಸ್. ನಂಃ363/2020 ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **06.03.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಎದುರುದಾರರ ಪರ ಶ್ರೀ.ಕೆ.ಎಂ.ಯು ವಕೀಲರಿಂದಃ

ನಾನು ಪಿಯುಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿರುವ ಚಿನ್ನನಾಯಕನಹಳ್ಳಿಯಲ್ಲಿ ಸುಮಾರು 4 ವರ್ಷಗಳಿಂದ ವಾಸ ಮಾಡುತ್ತಿದ್ದೇನೆ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬನ್ನೂರು ಪಟ್ಟಣದಲ್ಲಿ ವಾಸ ಮಾಡುತ್ತಿದ್ದೇನೆ ಎಂದು ತಿಳಿಸಿದ್ದು, ಆ ಸಮಯದಲ್ಲಿ ನಾನು ನನ್ನ ಅಜ್ಜಿಯೊಂದಿಗೆ ವಾಸ ಮಾಡುತ್ತಿದ್ದು, ಸದರಿಯವರು ತೀರಿಕೊಂಡ ನಂತರ ನಾನು ಮೇಲೆ ಹೇಳಿದ ವಿಳಾಸದಲ್ಲಿ ವಾಸ ಮಾಡುತ್ತಿದ್ದೇನೆ. ಸದರಿ ಸಂಗತಿಯನ್ನು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ.

ನನ್ನೊಂದಿಗೆ ನನ್ನ ತಂದೆ-ತಾಯಿ, ಇಬ್ಬರು ತಮ್ಮಂದಿರು ಹಾಗೂ ನನ್ನ ಮಗಳು ವಾಸ ಮಾಡುತ್ತಿದ್ದಾರೆ. ನಿಶ್ಚಿತಾರ್ಥ ಯಾವ ದಿನಾಂಕದಂದು ಆಗಿರುತ್ತದೆ ಎಂದರೆ ಸಾಕ್ಷಿ ನಿಶ್ಚಿತಾರ್ಥ ಕಾರ್ಯಕ್ರಮ ಮಾಡಿರುವುದಿಲ್ಲ, ಆದರೆ ಮನೆಗೆ ಬಂದು ಹೂ ಮುಡಿಸಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಿನ ನಮ್ಮ ಮನೆಯಲ್ಲಿ ಮದುವೆಯ ಮಾತುಕತೆ ಆಗಿರುತ್ತದೆ. ಸದರಿ ದಿನ ನಡೆದ ಮಾತುಕತೆಯ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಸದರಿ ಹೂಮುಡಿಸುವ ದಿನದಿಂದ ಎಷ್ಟು ದಿನಗಳ ನಂತರ ಮದುವೆ ಆಗಿರುತ್ತದೆ ಎಂದು ನನಗೆ ನಿಖರವಾಗಿ ಗೊತ್ತಿರುವುದಿಲ್ಲ.

ನನ್ನ ಮದುವೆ ಎದುರುದಾರರೊಂದಿಗೆ ದಿನಾಂಕ **13.11.2009** ರಂದು ಭಾರತಿ ಕಲ್ಯಾಣ ಮಂಟಪದಲ್ಲಿ ನಡೆದಿರುತ್ತದೆ. ಮದುವೆಗೆ ಸಂಬಂಧಿಸಿದ ಎಲ್ಲಾ ಖರ್ಚುಗಳನ್ನು ಎದುರುದಾರರೇ ಭರಿಸಿರುತ್ತಾರೆ ಎಂದರೆ ಸರಿಯಲ್ಲ. **100** ಗ್ರಾಂ ಬಂಗಾರ ಹಾಗೂ ರೂ.**1** ಲಕ್ಷ ನಗದು ಹಣವನ್ನು ನನ್ನ ಅಜ್ಜಿ-ತಾತ ಹಾಗೂ ಸೋದರಮಾವರವರು ಎದುರುದಾರರಿಗೆ ವರದಕ್ಷಿಣೆ ಎಂದು ನೀಡಿರುತ್ತಾರೆ. ಆ ಸಮಯದಲ್ಲಿ ನಾನು ಇರಲಿಲ್ಲ.

ಆ ಸಮಯದಲ್ಲಿ ನಾನು ಕೊಠಡಿಯೊಳಗೆ ಇದ್ದೆನು. 100 ಗ್ರಾಂ ಬಂಗಾರ ಹಾಗೂ ನಗದು ಹಣವನ್ನು ಮದುವೆಯ ಮುಂಚೆ ನೀಡಿರುತ್ತಾರೆ. ಸದರಿ ವಿಚಾರವನ್ನು ನನ್ನ ತಾತ-ಅಜ್ಜಿ ನನಗೆ ತಿಳಿಸಿರುವ ಕಾರಣ ನನಗೆ ವಿಚಾರ ತಿಳಿದಿರುತ್ತದೆ. ಬಂಗಾರ ಹಾಗೂ ನಗದು ಹಣವನ್ನು ಯಾವ ದಿನದಂದು ಎದುರುದಾರರಿಗೆ ನೀಡಿರುತ್ತಾರೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಬಂಗಾರ ಹಾಗೂ ನಗದು ಹಣ ನೀಡಿದ ಬಾಬ್ತು ಯಾವುದೇ ಪೋಟೋ ಅಥವಾ ವಿಡಿಯೋ ಚಿತ್ರೀಕರಣವನ್ನು ನನ್ನ ತಾತ-ಅಜ್ಜಿ ಮಾಡಿರುವುದಿಲ್ಲ. ಎದುರುದಾರರಿಗೆ ಬಂಗಾರ ನೀಡಿದ ಬಾಬ್ತು ನನ್ನ ತಾತ-ಅಜ್ಜಿಯವರು ಬಂಗಾರ ಖರೀದಿಸಿದ ಬಗ್ಗೆ ಯಾವುದೇ ರಸೀದಿ ಇರುವುದಿಲ್ಲ.

ಎದುರುದಾರರು ಯಾವ ಯಾವ ದಿನಾಂಕದಂದು ಹೊಡೆದಿರುತ್ತಾರೆ ಹಾಗೂ ಕಿರುಕುಳ ನೀಡಿರುತ್ತಾರೆ ಎಂದರೆ ಸಾಕ್ಷಿಯು ಎದುರುದಾರರು ಪ್ರತಿದಿನ ಕುಡಿದುಕೊಂಡು ಬಂದು ಹೊಡೆಯುತ್ತಿದ್ದರು ಹಾಗೂ ಕಿರುಕುಳ ನೀಡುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ನಾನು ಅರ್ಜಿಯಲ್ಲಿ ತಿಳಿಸಿರುತ್ತೇನೆ. ಎದುರುದಾರರು ಪ್ರತಿದಿನ ನನ್ನೊಂದಿಗೆ ಜಗಳ ಮಾಡುತ್ತಿದ್ದ ಬಾಬ್ತು ನಾನು ಠಾಣೆಗೆ ದೂರು ನೀಡಿರುತ್ತೇನೆ. ನಾನು ಎದುರುದಾರರು ವಿರುದ್ಧ ದೂರು ನೀಡಿದ ಬಾಬ್ತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಹೆಚ್ಚಿನ ರೂ.50 ಸಾವಿರ ಹಣವನ್ನು ನನ್ನ ತಂದೆ-ತಾಯಿಯವರು ಎದುರುದಾರರಿಗೆ ನೀಡಿರುತ್ತಾರೆ. ಸದರಿ ಹಣ ನೀಡಿದ ದಿನಾಂಕ, ತಿಂಗಳು ಹಾಗೂ ವರ್ಷ ನನಗೆ ಹೇಳಲು ಆಗುವುದಿಲ್ಲ. ನಾವು ಎದುರುದಾರರಿಗೆ ವರದಕ್ಷಿಣೆ ನೀಡಿರುವುದಿಲ್ಲ ಮತ್ತು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನಾಯರ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಅಲ್ಲಿ ಮಾಸಿಕ ರೂ.6 ಸಾವಿರ ಹಣವನ್ನು ವೇತನವಾಗಿ ನೀಡುತ್ತಾರೆ. ಸದರಿ ಹಣವನ್ನು ನಗದು ರೂಪದಲ್ಲಿ ನೀಡುತ್ತಾರೆ. ಸದರಿ ಹಣವನ್ನು ವೇತನವಾಗಿ ನೀಡುವ ಬಾಬ್ತು ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಪೆಟ್ರೋಲ್ ಬಂಕ್ ನಲ್ಲಿ ಕೆಲಸ ಮಾಡುತ್ತಾ ಸುಮಾರು 1 ವರ್ಷ 6 ತಿಂಗಳು ಆಗಿರುತ್ತದೆ. ಸದರಿ ಸಂಗತಿಯನ್ನು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ಸಲ್ಲಿಸಿರುವ ಆದಾಯದ ವಿವರದ ಪ್ರಮಾಣ ಪತ್ರದಲ್ಲಿ ತಿಳಿಸಿರುವ

ಬಗ್ಗೆ ನನಗೆ ನೆನಪಿರುವುದಿಲ್ಲ. ನಾನು ಸದರಿ ಪೆಟ್ರೋಲ್ ಬಂಕ್ ನಲ್ಲಿ ಕ್ಯಾಶಿಯರ್ ಆಗಿ ಸುಮಾರು 3 ವರ್ಷಗಳಿಂದ ಕೆಲಸ ಮಾಡುತ್ತಿದ್ದು, ನನಗೆ ಮಾಸಿಕ ರೂ.15 ಸಾವಿರ ವೇತನ ಇರುತ್ತದೆ ಎಂದರೆ ಸರಿಯಲ್ಲ.

ಎದುರುದಾರರ ಹೆಸರಿನಲ್ಲಿ ಇರುತ್ತದೆ ಎನ್ನಲಾದ ಜಮೀನು ಅವರ ತಂದೆಯ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯು ಮಾದಯ್ಯ ಅಂದರೆ ಎದುರುದಾರರ ತಂದೆಗೆ ದಾನ ಪತ್ರದ ಮುಖಾಂತರ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿ ಎದುರುದಾರರ ತಂದೆಯ ಸ್ವಂತ ಆಸ್ತಿ ಎಂದರೆ ಸರಿ. ಎದುರುದಾರರಿಗೆ ಸೇರಿದ ಎನ್ನಲಾದ 2 ಅಂಗಡಿ ಮಳಿಗೆಗಳಿಗೆ ಸಂಬಂಧಿಸಿದಂತೆ ಪಂಚಾಯತಿಯಿಂದ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಸಾಕ್ಷಿ ಮುಂದುವರಿದು ಎದುರುದಾರರು ತಮ್ಮ ಮನೆಯಲ್ಲಿಯೇ ಅಂಗಡಿಗಳನ್ನು ನಡೆಸುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯು ಪುಟ್ಟರಂಗಮ್ಮರವರ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯು ಈಗ ನನ್ನ ಮೈದುನರವರ ಹೆಸರಿನಲ್ಲಿ ಇರುತ್ತದೆ.

ಎದುರುದಾರರಿಗೆ ಸೇರಿದ ಯಾವುದೇ ಜಮೀನು, ಅಂಗಡಿ ಹಾಗೂ ಮನೆ ಇರುವುದಿಲ್ಲ ಹಾಗೂ ಅವರಿಗೆ ಯಾವುದೇ ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಎದುರುದಾರರ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಎಲ್ಲಾ ಖರ್ಚು-ವೆಚ್ಚಗಳನ್ನು ಭರಿಸಿ ಸರಳವಾಗಿ ಮದುವೆ ಆಗಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರು ಅಥವಾ ಅವರ ಪೋಷಕರು ನನಗೆ ವರದಕ್ಷಿಣೆ ತೆಗೆದುಕೊಂಡು ಬರಲು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ನನ್ನನ್ನು ಪ್ರೀತಿಯಿಂದ ಹಾಗೂ ಕಾಳಜಿಯಿಂದ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸುಮಾರು 7 ವರ್ಷಗಳಿಂದ ಎದುರುದಾರರು ಚೆನ್ನಾಗಿ ಸಂಸಾರ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಮಗಳು ಶರ್ಮಿತಾ ಶ್ರೀರಂಗಪಟ್ಟಣ ತಾಲ್ಲೂಕಿನ ಓಂ ಶ್ರೀ ಅನಿನಿಕೇತನ ಶಾಲೆಯಲ್ಲಿ 7 ವರ್ಷಗಳಿಂದ ವ್ಯಾಸಂಗ ಮಾಡುತ್ತಿರುತ್ತಾರೆ. ಸದರಿ ಶಾಲೆಯಲ್ಲಿ ವಿಧ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಆದರೆ ಮೊದಲು ವ್ಯಾಸಂಗ ಮಾಡುತ್ತಿದ್ದ ಶಾಲೆಯ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಐಷಾರಾಮಿ ಜೀವನಕ್ಕೆ ಮಾರುಹೋಗಿ ಸಣ್ಣಪುಟ್ಟ ವಿಷಯಗಳಿಗೆ ಎದುರುದಾರರೊಂದಿಗೆ ಗಲಾಟೆ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ನಾನು ಎದುರುದಾರರ ವಯಸ್ಸಾದ ತಂದೆ-ತಾಯಿಯವರನ್ನು ನೋಡಿಕೊಳ್ಳದೇ ಅವರನ್ನು ನಿಂದಿಸುತ್ತಿದ್ದೆ ಹಾಗೂ ನನ್ನ ಕರ್ತವ್ಯಗಳನ್ನು ನಾನು ಸರಿಯಾಗಿ ಪಾಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ಎದುರುದಾರರು ಮೈಸೂರಿನ ಜೆ.ಕೆ ಟಯರ್ಸ ಕಾರ್ಖಾನೆಯಲ್ಲಿ ಬದಲೀ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಎದುರುದಾರರು ಕೆಲಸಕ್ಕೆ ಹೋಗುವ ಸಮಯಕ್ಕೆ ಸರಿಯಾಗಿ ಊಟ ತಿಂಡಿ ಮಾಡಿಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ದಿನನಿತ್ಯ ಎದುರುದಾರರೊಂದಿಗೆ ಜಗಳ ಮಾಡಿ ಅವರಿಗೆ ಮಾನಸಿಕವಾಗಿ ಕಿರುಕುಳ ನೀಡಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ನನಗೆ ತಿಳುವಳಿಕೆ ಹೇಳಿದ್ದರೂ ಸಹ ನಾನು ಅದನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರರು ಹಾಗೂ ಅವರ ಪೋಷಕರನ್ನು ಕೇಳದೇ ಪದೇ ಪದೇ ತವರು ಮನೆಗೆ ಹೋಗುವ ಅಭ್ಯಾಸ ಮಾಡಿಕೊಂಡಿದ್ದೆನು ಎಂದರೆ ಸರಿಯಲ್ಲ. ಎದುರುದಾರರು ಬಂದು ನನ್ನನ್ನು ಕರೆದ್ದರೂ ಸಹ ಅವರೊಂದಿಗೆ ಗಲಾಟೆ ಮಾಡಿ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ 3 ವರ್ಷಗಳ ಹಿಂದೆ ಪಾರ್ಶ್ವವಾಯು ಆಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಚಾರ ನನಗೆ ತಿಳಿದಿದ್ದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ಪಾರ್ಶ್ವವಾಯು ಆದ ಕಾರಣ ಅವರಿಗೆ ಕೆಲಸಕ್ಕೆ ಹೋಗಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರಿಗೆ ಕೆಲಸ ಮಾಡಲು ಆಗದ ಕಾರಣ ಕಾರ್ಖಾನೆಯವರು ಎದುರುದಾರರನ್ನು ಬದಲೀ ಕೆಲಸದಿಂದ ತೆಗೆದು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಎದುರುದಾರರಿಗೆ ಪಾರ್ಶ್ವವಾಯುವಾದ ನಂತರ ನಾನು ಅವರನ್ನು

ಸರಿಯಾಗಿ ನೋಡಿಕೊಳ್ಳದೇ ಹಾಗೂ ಶೂಶ್ರಷೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಪಾರ್ಶ್ವವಾಯು ಆಗಿರುವ ಎದುರುದಾರರನ್ನು ಹಾಗೂ ವಯಸ್ಸಾದ ತಂದೆ-ತಾಯಿಯನ್ನು ನೋಡಿಕೊಳ್ಳಬೇಕಾಗುತ್ತದೆ ಎಂದು ನಾನು ತವರು ಮನೆಗೆ ಹೋಗಿ ಚೆನ್ನಾಗಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ. ನನ್ನ ತಂದೆಯ ಹೆಸರು ಸ್ವಾಮಿ ಬಿನ್ ಲೇಟ್ ವೆಂಕಟಪ್ಪ ಎಂದು ಇರುತ್ತದೆ. ಸಾಕ್ಷಿಗೆ 3 ಪಹಣಿ ಪತ್ರಿಕೆಗಳನ್ನು ತೋರಿಸಿದ್ದು, ಸದರಿ ಪಹಣಿ ಪತ್ರಿಕೆಗಳು ತಮ್ಮ ತಂದೆಗೆ ಸೇರಿದ ಪಹಣಿ ಪತ್ರಿಕೆಗಳು ಎಂದು ಸಾಕ್ಷಿ ನೋಡಿ ಒಪ್ಪಿದ ಕಾರಣ ಸದರಿ ಪಹಣಿ ಪತ್ರಿಕೆಗಳನ್ನು ಎದುರುದಾರ ಪರ ನಿ.ಆರ್-1 ರಿಂದ ನಿ.ಆರ್-3 ಎಂದು ಗುರುತಿಸಲಾಯಿತು. ನನ್ನ ತಂದೆಯ ಹೆಸರನಲ್ಲಿರುವ ಪಿತ್ರಾರ್ಜಿತ ಆಸ್ತಿ ಇರುವ ಕಾರಣ ನಾನು ನನ್ನ ತಂದೆಯ ಮನೆಯಲ್ಲಿ ಐಷಾರಾಮಿ ಜೀವನ ನಡೆಸುತ್ತಾ ಅಲ್ಲೇ ವಾಸ ಮಾಡುತ್ತಿದ್ದು, ಎದುರುದಾರರನ್ನು ನಿರ್ಲಕ್ಷಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ಪಾರ್ಶ್ವವಾಯು ಇರುವ ಕಾರಣ ಅವರಿಗೆ ಯಾವುದೇ ಕೆಲಸ ಮಾಡಲು ಆಗುವುದಿಲ್ಲ ಮತ್ತು ಅವರು ನನಗೆ ಜೀವನಾಂಶ ನೀಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಬಿ.ಪಿ ಮತ್ತು ಮಾನಸಿಕ ಉದ್ವೇಗದ ಕಾಯಿಲೆಯಿಂದ ಬಳಲುತ್ತಿದ್ದು, ಅದಕ್ಕೆ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಚಿಕಿತ್ಸೆಗೆ ಎದುರುದಾರರು ಪ್ರತಿ ತಿಂಗಳು ರೂ.10 ಸಾವಿರ ಹಣವನ್ನು ಸಾಲ ಮಾಡಿ ಖರ್ಚು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರನ್ನು ನೋಡಿಕೊಳ್ಳಲು ಯಾರು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೆಟ್ರೋಲ್ ಬಂಕ್ ನಲ್ಲಿ ಕೆಲಸ ಮಾಡಿ ಹಣ ಗಳಿಸುತ್ತಿರುವ ಕಾರಣ ಎದುರುದಾರರು ಜೀವನಾಂಶ ಕೊಡುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ನನ್ನೊಂದಿಗೆ ಸಂಸಾರ ಮಾಡಲು ಸಿದ್ದರಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರನ್ನು ನೋಡಿಕೊಂಡರೇ ಅವರ ಚಿಕಿತ್ಸೆ ಖರ್ಚು ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**